ಸಾಕ್ಷಿಯನ್ನು ದಿನಾಂಕ **07-06-2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಆರ್. ಎಸ್. ವಕೀಲರಿಂದ

ವಾದಿಯರು ಯಾವ ವಿಚಾರಕ್ಕೆ ಈ ದಾವೆ ಹಾಕಿರುತ್ತಾರೆ ಎಂದು ತಿಳಿದುಕೊಂಡಿದ್ದೇನೆ ಎಂದರೆ ಸಾಕ್ಷಿಯು ವಾದಿಯರು ನಾವು ಒತ್ತುವರಿ ಮಾಡಿರುತ್ತೇವೆ ಎಂದು ದಾವೆ ಹಾಕಿದ್ದು ಆದರೆ ನಾವು ಯಾವುದೇ ಒತ್ತವರಿ ಮಾಡಿರುವುದಿಲ್ಲ ಎಂದು ಹೇಳುತ್ತಾರೆ.

ದಾವಾ 'ಎ' ಅನುಸೂಚಿ ಸ್ವತ್ತಿನ ಪೂರ್ವ ದಿಕ್ಕಿಗೆ ಸರ್ವೇ ನಂ.31 ಬರುತ್ತದೆ. ಸರ್ವೇ ನಂ.31 ರಲ್ಲಿ ಮೂರು ಗುಂಟೆ ಜಮೀನಿನಲ್ಲಿ ನಾವು ವಾಸದ ಮನೆ ಮಾಡಿಕೊಂಡು ವಾಸ ಇದ್ದೇವೆ. ಈ ದಾವೆಯಲ್ಲಿ ವಾದಿಯರು ಹಾಜರು ಪಡಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ವಾದಿಯರು ಹಾಜರು ಪಡಿಸಿರುವ ನಿ.ಪಿ.-9 ಕ್ಕೆ ನನ್ನ ಯಾವುದೇ ತಕರಾರು ಇಲ್ಲಾ ಎಂದರೆ ಸಾಕ್ಷಿಯು ಹದ್ದುಬಸ್ತು ನಕ್ಷೆ ಆಗಿರುವುದಿಲ್ಲ ಎಂದು ಹೇಳುತ್ತಾರೆ. ನಿ.ಪಿ.-9 ರಿಂದ 11 ದಾಖಲೆಗಳನ್ನು ನೋಡಿರುತ್ತೇನೆ. ದಾವಾ ಸ್ವತ್ತಿನಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಮತ್ತು ಅದರಲ್ಲಿ ಎಷ್ಟು ವಿಸ್ತೀರ್ಣ ಒತ್ತುವರಿಯಾಗಿದೆ ಎಂದು ನಿ.ಪಿ.-9 ರಲ್ಲಿ ಇದ್ದು ಅದನ್ನು ನೋಡಿದ್ದೀರಾ? ಎಂದರೆ ಸಾಕ್ಷಿಯು ಅದನ್ನು ನೋಡಿಲ್ಲ ಎಂದು ಹೇಳುತ್ತಾರೆ. ನಿ.ಪಿ.-9 ರಲ್ಲಿರುವ ವಿವರಣೆಯನ್ನು ನಮ್ಮ ವಕೀಲರ ಮೂಲಕ ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿ.ಪಿ.-9 ರಲ್ಲಿ ದಾವಾ ಸ್ವತ್ತಿನ ಪೂರ್ವಕ್ಕೆ ಸರ್ವೇ ನಂ. 35 ಮತ್ತು ಅದರ ಕೆಳಗಡೆ ಲಾಗೂ ಮಜರೆ ಎಂದು ಇದೆ ಎಂದರೆ ಸಾಕ್ಷಿಯು ನಿ.ಪಿ.-9 ಸರಿಯಿಲ್ಲ ಎಂದು ಹೇಳುತ್ತಾರೆ.

ವಾದಿಯರು ತಮ್ಮ ವಾದ ಪತ್ರದಲ್ಲಿ ಏನು ಬರೆಸಿರುತ್ತಾರೆ ಎಂದು ತಿಳಿದುಕೊಂಡಿರುತ್ತಾರೆ. ನಿ.ಪಿ.-9 ಸರಿಯಿಲ್ಲ ಎಂದು ನಾವು ಸಕ್ಷಮ್ಮ ಪ್ರಾಧೀಕಾರದ ಮುಂದೆ ಅದನ್ನು ಪ್ರಶ್ನೆ ಮಾಡಿದ್ದೀರಾ? ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ಈ ದಾವೆ ವಿಚಾರಣೆಗೆ ಇರುವುದರಿಂದ ನಾವು ಪ್ರಶ್ನೆ ಮಾಡಿಲ್ಲ ಎಂದು ಹೇಳುತ್ತಾರೆ. ನಿ.ಪಿ.-9 ಅನ್ನು ನಾವು ಪ್ರಶ್ನೆ ಮಾಡುತ್ತೇವೆ ಎಂದು ನಮ್ಮ ಲಿಖಿತವಾದ ಪತ್ರದಲ್ಲಿ ಬರೆಸಿರುತ್ತೇವೆ.

ಸರ್ವೇ ನಂ. **31** ರ ಜಮೀನಿನ್ನು ನಾವು **1978** ರಲ್ಲಿ ಕ್ರಯಕ್ಕೆ ತೆಗೆದುಕೊಂಡಿರುತ್ತೇವೆ. ನಮ್ಮ ಜಮೀನಿನಲ್ಲಿ ಮನೆ ಕಟ್ಟುವುದಕ್ಕೆ ಪರವಾನಿಗೆ ಪಡೆದುಕೊಂಡಿರುವ ಬಗ್ಗೆ ದಾಖಲಾತಿ ಇದೆ ಎಂದರೆ ಸಾಕ್ಷಿಯು ದಾಖಲಾತಿ ಇಲ್ಲಾ ಎಂದು ಹೇಳುತ್ತಾರೆ. ವಾದಿಯರ ದಾವಾ ಸ್ವತ್ತಿನಲ್ಲಿ ಒಟ್ಟು **26** ಗುಂಟೆ ಜಮೀನು ಒತ್ತುವರಿಯಾಗಿದ್ದು ಅದರಲ್ಲಿ ನಾವು ಸಹ ಸ್ವಲ್ಪ ಜಮೀನು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೇ ನಂ. **31** ಅನ್ನು ನಾವು ಕ್ರಯಕ್ಕೆ ತೆಗೆದುಕೊಂಡ ನಂತರ ಅಳತೆ ಮಾಡಿಸಿದ್ದೀರಾ**?** ಎಂದರೆ ಸಾಕ್ಷಿಯು ಅಳತೆ ಮಾಡಿಸಿರುತ್ತೇವೆ ಎಂದು ನಮ್ಮ ತಾಯಿ ಹೇಳುತ್ತಿದ್ದರು ಮತ್ತು ಅದಕ್ಕೆ ದಾಖಲೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪೋಡಿಯಾಗಿರುವ ದಾಖಲೆಯನ್ನು ನಿ.ಡಿ.**-42** ರೊಂದಿಗೆ ಲಗತ್ತಿಸಿರುತ್ತಾರೆ ಆದರೆ ಸದರಿ ದಾಖಲೆಯನ್ನು ನಮ್ಮ ತಾಯಿ ಕಳೆದುಕೊಂಡಿರುತ್ತಾರೆ. ಸದರಿ ಪೋಡಿ ದಾಖಲೆಯನ್ನು ಸಂಬಂಧಪಟ್ಟ ಕಛೇರಿಯಿಂದ ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದಾದರೂ ತೊಂದರೆ ಇದೆಯಾ**?** ಎಂದರೆ ಸಾಕ್ಷಿಯು ತೊಂದರೆ ಇಲ್ಲಾ ಎಂದು ಹೇಳುತ್ತಾರೆ. ನಮ್ಮ ಜಮೀನು ಸರ್ವೇ ನಂ. **31** ರಲ್ಲಿ ಮೂರು ಗುಂಟೆ ಜಮೀನು ಎಲ್ಲಿ ಬರುತ್ತದೆ ಎಂದು ನಮಗೆ ಗೊತ್ತಿಲ್ಲದಿರುವುದರಿಂದ ನಾವು ಸರ್ವೇ ನಂ. **38** ರಲ್ಲಿ ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಗ್ರಾಮ ಠಾಣೆ ಸರ್ವೇ ಮಾಡಿದಾಗ ನಾವು ಇಂತಿಷ್ಟು ಒತ್ತುವರಿ ಮಾಡಿರುತ್ತೇವೆ ಎಂದು ನಾವು ನಮ್ಮ ಮನೆಯ ಹಿಂದೆ ಕಲ್ಲು ಸಹ ಹಾಕಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ. **31** ರಲ್ಲಿ ಮೂರು ಗುಂಟೆ ಜಮೀನು ಎಲ್ಲಿ ಬರುತ್ತದೆ ಎಂದು ನಮಗೆ ಗೊತ್ತಿಲ್ಲವಾದ್ದರಿಂದ ತಪ್ಪು ಗ್ರಹಿಕೆಯಿಂದ ನಾವು ಸರ್ವೇ ನಂ. **38** ರಲ್ಲಿ ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಡಿ.**-**

**42** ರಲ್ಲಿ **1** ನೇ ಪುಟದಲ್ಲಿ ಸರ್ವೇ ನಂ.**31** ಅನ್ನು ವಿವರಿಸುವಾಗ ಅಕ್ಕ ಪಕ್ಕದ ಜಮೀನುಗಳ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಉಲ್ಲೇಖ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಿ.ಡಿ.**-42** ರಲ್ಲಿ ಸರ್ವೇ ನಂ. **31** ಕ್ಕೆ ಮೂರು ಗುಂಟೆ ಜಮೀನಿಗೆ ಚೆಕ್ಕು ಬಂದಿಯಲ್ಲಿ ಸರ್ವೇ ನಂಬರ್ ಜಮೀನುಗಳ ನಮೂದು ಇಲ್ಲಾ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅಕ್ಕ ಪಕ್ಕ ಮನೆ ಮತ್ತು ಜಾಗ ಮತ್ತು ರಸ್ತೆ ನಮೂದು ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಮ್ಮ ಮೂರು ಗುಂಟೆ ಜಮೀನಿಗೆ ಅಕ್ಕ ಪಕ್ಕ ಸರ್ವೇ ನಂಬರ್ ಜಮೀನುಗಳನ್ನು ಗುರುತು ಮಾಡಿರುವುದಿಲ್ಲ ಆದ್ದರಿಂದ ನಮ್ಮ **3** ಗುಂಟೆ ಜಮೀನು ನಿಖರವಾಗಿ ಎಲ್ಲಿ ಬರುತ್ತದೆ ಎಂದು ನಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಜಮೀನಿನ ಅಕ್ಕ ಪಕ್ಕ ಮನೆ, ರಸ್ತೆ ಮತ್ತು ಜಾಗ ಗುರುತಿಸಿರುತ್ತಾರೆ ಎಂದು ಹೇಳುತ್ತಾರೆ.

ನಮ್ಮ ಮನೆ ಮತ್ತು ವಾದಿಯರ ಮನೆ ಎದುರು ಬದರು ಸುಮಾರು **100** ಮೀಟರ್ ಅಂತರದಲ್ಲಿ ಇದೆ. ಈ ಹಿಂದೆ ವಾದಿ ಮತ್ತು ಅವರ ಮಾರಾಟಗಾರರ ಮಧ್ಯೆ ನಡೆದಂತ ದಾವೆಯಲ್ಲಿ ನ್ಯಾಯಾಲಯದಿಂದ ನಿಯೋಗಿ ಸ್ಥಳಕ್ಕೆ ಬಂದು ಅಳತೆ ಕಾರ್ಯ ಮಾಡಿರುವ ವಿಚಾರ ಮತ್ತು ಪೋಡಿ ಮಾಡಿರುವ ವಿಚಾರ ಎಲ್ಲರಿಗೂ ಗೊತ್ತಿದ್ದು ಅದೇ ರೀತಿ ಸದರಿ ವಿಚಾರ ನಮಗೂ ಸಹ ಗೊತ್ತಿರುತ್ತದೆ ಎಂದರೆ ಸಾಕ್ಷಿಯು ಯಾವುದೇ ಪೋಡಿ ಅಳತೆ ಕಾರ್ಯ ಆಗಿರುವುದಿಲ್ಲ ಎಂದು ಹೇಳುತ್ತಾರೆ. ನಿ.ಪಿ.**-9** ರಂತೆ ಹದ್ದು ಬಸ್ತು ಕಾರ್ಯ ಆಗಿರುವ ವಿಚಾರ ನಮಗೆ ಗೊತ್ತಿದ್ದರೂ ಸಹ ಅದನ್ನು ಒಪ್ಪಿಕೊಂಡರೆ ನಮಗೆ ತೊಂದರೆ ಆಗುತ್ತದೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಗ್ರಾಮ ಪಂಚಾಯಿತಿ

ಅಧಿಕಾರಿಗಳೊಂದಿಗೆ ಶಾಮೀಲಾಗಿ ಮನೆಯ ಖಾತಾ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಹಾಜರು ಪಡಿಸಿರುತ್ತೇವೆಂದರೆ ಸರಿಯಲ್ಲ. ನಾವು ಸರ್ವೇ ನಂ. **31** ರಲ್ಲಿ ಇದ್ದು **38** ರಲ್ಲಿ ಇಲ್ಲಾ ಎಂದು ನಮ್ಮ ಲಿಖಿತ ಹೇಳಿಕೆಯಲ್ಲಿ ಮತ್ತು ನಮ್ಮ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ- ಇಲ್ಲ.</u>

(ಸಾಕ್ಷಿಯು ಕೊಟ್ಟ ಸಾಕ್ಷ್ಯವನು ನನ್ನ ಉಕ್ತಲೇಖನದ ರೀತ್ಯಾ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಿಸಲಾಯ್ತು.)

(ಸಾಕ್ಷಿಗೆ ಓದಿ , ತಿಳಿಸಿ ಹೇಳಿದಾಗ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ .)

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ .